| Form No.4 (Civil)<br>Deposition Sheets<br>(R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆಃ 02/2014

ಪ್ರಾ.ಸಾ. 1 ಚಾ.ಸಾ. 1

ಸಾಕ್ಷಿದಾರರ ಹೆಸರು : ಶಿವಶಂಕರ
ತಂದೆಯ ಹೆಸರು : ನಾಗೇಂದ್ರ ಹೊಳ್ಕರ
ವಯಸ್ಸು 63 ವರ್ಷಗಳು
ಉದ್ಯೋಗ : ವ್ಯಾಪಾರ
ವಾಸ : ಸುರಪೂರ

ಪ್ರಮಾಣವಚನ ಬೋಧಿಸಿದ ದಿನಾಂಕಃ 05-03-2021

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾಸಾ-2 ಸಂಜೀವಪ್ಪ ಮತ್ತು ಚಾಸಾ-3 ಬಾಬುರಾವ್ ಗೊತ್ತು. ಕೋರ್ಟಿನ ಮುಂದಿರುವ ಆರೋಪಿ-2 ಸಿದ್ದಯ್ಯಸ್ವಾಮಿ ಗೊತ್ತು. 1ನೇ ಆರೋಪಿ ಗುರುಪಾದಪಾಟೀಲ್ ಇವರು ನನಗೆ ಗೊತ್ತು. 1ನೇ ಆರೋಪಿ ಗುರುಪಾದಪಾಟೀಲ್ ಈಗ ತೀರಿಕೊಂಡಿದ್ದಾರೆ ಅಂತಾ ನನಗೆ ವಿಚಾರ ಗೊತ್ತಾಯಿತು.

2. ದಿಃ 09.04.2010 ರಂದು ಸರ್ವೆ 46/1/2 ಹಸನಾಪೂರ ಜಮೀನಿನ ಎನ್.ಎ ಮಾಡಲು ನಾನು ಯಾದಗಿರಿ ಜಿಲ್ಲಾಧಿಕಾರಿಗಳ ಕಚೇರಿಗೆ ಅರ್ಜಿ ಹಾಕಿದ್ದೇನೆ. ನಾನು ಕೊಟ್ಟಂತ ಅರ್ಜಿಯನ್ನು ಯಾದಗಿರಿ ಜಿಲ್ಲಾಧಿಕಾರಿಯವರು ಯಾದಗಿರಿ ಎ.ಸಿ ಕಚೇರಿಗೆ ಎನ್‌ಓಸಿ (ನಿರಾಕ್ಷೇಪಣಾ ಪತ್ರ) ಕಳುಹಿಸುವಂತೆ ದಿಃ 10.09.2010 ರಂದು ಕಳುಹಿಸಿದ್ದರು.

3. ನಂತರ ನಾನು ಯಾದಗಿರಿ ಎ.ಸಿ ಕಚೇರಿಗೆ ಹೋಗಿ 1ನೇ ಆರೋಪಿ ಗುರುಪಾದಪ್ಪ ಪಾಟೀಲ್ ಇವರನ್ನು ಬೇಟಿ ಆಗಿದ್ದೇನೆ. ಎರಡು ದಿನಗಳ ನಂತರ ಎ.ಸಿ ಕಚೇರಿಯವರು ನಮ್ಮ ಜಮೀನನ್ನು ನೋಡಲು ಬಂದರು. ಆ ಕಾಲಕ್ಕೆ ಎ.ಸಿ ಮೇಡಂ ಬಂದಿದ್ದರು. ಅವರು ಬಂದು ನಮ್ಮ ಜಮೀನನ್ನು ಪರಿಶೀಲನೆ ಮಾಡಿದಾಗ ಎರಡು ಬಿ.ಎಸ್.ಎನ್.ಎಲ್ ಹಳೆ ಕಂಬಗಳು ಇದ್ದವು. ಎನಸ್ಪೆಕ್ಷನ್‌ಗೆ ಬಂದಾಗ ಬಿಎಸ್‌ಎನ್‌ಎಲ್ ಕಂಬಗಳನ್ನು ತೆಗೆಸುವಂತೆ ನನಗೆ ತಿಳಿಸಿದ್ದು, ಅದರಂತೆ

ನಾನು ಬಿಎಸ್‌ಎನ್‌ಎಲ್ ಕಂಬಗಳು ನಮ್ಮ ಜಮೀನಿನಿಂದ ತೆಗೆಸಿ ಒಂದು ಪತ್ರವನ್ನು ಎ.ಸಿ ಕಚೇರಿಗೆ ಕೊಟ್ಟಿದ್ದೇನೆ.

4. 1ನೇ ಆರೋಪಿ ಗುರುಪಾದಪ್ಪಪಾಟೀಲ್ ಇವರು ನನಗೆ ಎರಡು ದಿನಗಳು ಬಿಟ್ಟು ಕಚೇರಿಗೆ ಬರುವಂತೆ ತಿಳಿಸಿದರು. ನಾನು ಎರಡು ದಿನಗಳು ಬಿಟ್ಟು ಪುನಃ ಯಾದಗಿರಿ ಎ.ಸಿ ಕಚೇರಿಗೆ ಬಂದಿದ್ದೇನೆ. ಎನ್‌ಎ ಮಾಡಲು ಒಂದು ಎಕರೆಗೆ ಇಷ್ಟು ಹಣ ಖರ್ಚು ಆಗುತ್ತದೆ ಆ ಹಣವನ್ನು ನಾನು ಕಟ್ಟಬೇಕಾಗುತ್ತದೆ ಅಂತಾ 1ನೇ ಆರೋಪಿ ಗುರುಪಾದಪ್ಪ ಪಾಟೀಲ್ ಹೇಳಿದರು. ಎರಡು ಎಕರೆಯಿಂದ ಒಟ್ಟು 25 ರಿಂದ 30 ಸಾವಿರ ಹಣ ಖರ್ಚು ಆಗುತ್ತದೆ ಅಂತಾ ಹೇಳಿ 1ನೇ ಆರೋಪಿ ಗುರುಪಾದಪ್ಪ ಪಾಟೀಲ್ ತಿಳಿಸಿದ್ದಾರೆ.

5. ನಾನು ಹಣ ಕಟ್ಟಲು ತಯಾರಾದರೂ ಕೂಡಾ ಅವರು ಏಷ್ಟು ಹಣ ಕಟ್ಟಬೇಕು ಅಂತಾ ಹೇಳಿ ನನಗೆ ಸರಿಯಾದ ಮಾಹಿತಿ ಕೊಡಲಿಲ್ಲಾ, ನಂತರ ನಾನು ಲೋ.ಕಚೇರಿಗೆ ಹೋದೆ. ಲೋ.ಕಚೆರಿಯಲ್ಲಿ ನಾನು ಎ.ಸಿ ಕಚೇರಿಯವರು ಏಷ್ಟು ಹಣ ಕಟ್ಟಬೇಕು ಅಂತಾ ಹೇಳುತ್ತಿಲ್ಲ, ನನ್ನ ಕೆಲಸ ಆಗುತ್ತಿಲ್ಲ ಅಂತಾ ಹೇಳಿ ತಿಳಿಸಿದ್ದೇನೆ.

6. ನಂತರ ಲೋ.ಕಚೇರಿಯಲ್ಲಿ ನನಗೆ ಒಂದು ಅರ್ಜಿ ಬರೆಯಲು ತಿಳಿಸಿದ್ದಾರೆ. ಅರ್ಜಿಯಲ್ಲಿ ವಿವರವಾಗಿ ಬರೆದಿದ್ದು ಈಗ ನಾವು ಆ ಅರ್ಜಿಯಲ್ಲಿ ಏನು ಬರೆದಿದ್ದೇನೆ ಅಂತಾ ನನಗೆ ನೆನಪಿಲ್ಲ. ನಾನು ನನ್ನ ಅರ್ಜಿಯಲ್ಲಿ ಲೋ.ಪೋಲೀಸರು ಹೇಳಿದಂತೆ ಅರ್ಜಿ ಬರೆದಿದ್ದೇನೆ. ನಾನು ಅರ್ಜಿಯಲ್ಲಿ 1ನೇ ಆರೋಪಿ ಗುರುಪಾದಪ್ಪ ಪಾಟೀಲ್ ಇವರ ಮೇಲೆ ಬರೆದಿದ್ದೇನೆ. ಸಾಕ್ಷಿ ಕೋರ್ಟಿನ ಮುಂದೆ ಅರ್ಜಿ ಮತ್ತು ತಮ್ಮ ಸಹಿ ನೋಡಿ ಗುರುತುಮಾಡಿದ್ದು, ಸದರಿ ಅರ್ಜಿಯನ್ನು ಈಗ ನಿಪಿ-1 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತಾ ಗುರುತುಮಾಡಲಾಯಿತು.

(ಈಗಾಗಲೇ ಸಮಯ ಮದ್ಯಾಹ್ನ 2.10 ಗಂಟೆ ಆಗಿದ್ದು ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ.